# KALPATARU FIRST GRADE SCIENCE COLLEGE, TIPTUR

## QUALITY INDICATOR FRAMEWORK (QIF)

## CRITERION – 3.2.1

### Subject – National science day, Fun fair, Folk songs and Mathrubhashadivas

| Sl/No | Date | Content | Page no |
|---|---|---|---|
| 1 | 08/03/2019 | National Science Day | 1 |
| 2 | 08/02/2019 | Fun fair | 2 |
| 3 | 15/07/2019 | Folk song | 3 |
| 4 | 15/02/2020 | Fun fair | 4 |
| 5 | 21/02/2020 | Mathrubhashadivas | 5 |

Scanned with OKEN Scanner

...ಸ್ಪಡಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರಭಾರ ಸದಸ್ಯ ಕಾರ್ಯದರ್ಶಿ ಬಿ.ಗಣೇಶ್ ಮಾತನಾಡಿ,

ಹೆಚ್ಚುವರಿ ಜಿಲ್ಲಾ ಪೊಲೀ[illegible] ವರಿಷ್ಠಾಧಿಕಾರಿ ಶೋಭಾರಾಣಿ ಅವರು, 'ಕುಟುಂಬದ ಸಣ್ಣ ವಿಚಾರಕ್ಕೆ ಇಂದು ಮಹಿಳೆಯರು ಪೊಲೀಸ್ ಠಾಣೆ

...ಘ್ಘಾನ್, ವಿದ್ಯಾಲಕ್ಷ್ಮಿ ಭಟ್, [illegible] ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಎಸ್. ನಟರಾಜ್ ಇದ್ದರು.

### ವಿಜ್ಞಾನ ಪರಿಷತ್ ಜಿಲ್ಲಾ ಕೇಂದ್ರದ ಅಧ್ಯಕ್ಷ ಶಿವಕುಮಾರ್

# ವಿಜ್ಞಾನ ಬಳಕೆಗೆ ವಿವೇಕ ಮುಖ್ಯ

ಪ್ರಜಾವಾಣಿ ವಾರ್ತೆ

ತಿಪಟೂರು: ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವ ಬಿತ್ತುವುದೇ ವಿಜ್ಞಾನ ದಿನಾಚರಣೆ ಉದ್ದೇಶ. ವಿದ್ಯಾರ್ಥಿಗಳು ಮೂಲ ವಿಜ್ಞಾನದಲ್ಲಿ ಆಸಕ್ತಿ ವಹಿಸಿ ಸಂಶೋಧನೆಗೆ ಒತ್ತು ನೀಡಬೇಕು ಎಂದು ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಕೇಂದ್ರದ ಅಧ್ಯಕ್ಷ ಶಿವಕುಮಾರ್ ತಿಳಿಸಿದರು.

ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ನಡೆದ ವಿಜ್ಞಾನ ದಿನಾಚರಣೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ. ಎ.ಎಂ. ಶಿವಣ್ಣ ಮಾತನಾಡಿ, ಯುವಕರು ವಿಜ್ಞಾನ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು. ಮಾನವನ ಏಳಿಗೆಗೆ ಮಾತ್ರ ವಿಜ್ಞಾನ ಸಕಾರಾತ್ಮಕವಾಗಿ ಬಳಕೆಯಾಗಬೇಕು. ಅದರ ದುಷ್ಪರಿಣಾಮಗಳ ಬಗ್ಗೆಯೂ ಅರಿವಿರಬೇಕು ಎಂದರು.

ಕಲ್ಪತರು ವಿದ್ಯಾ ಸಂಸ್ಥೆ ಕಾರ್ಯದರ್ಶಿ ಪ್ರೊ.ರಾಜಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನಸಾಮಾನ್ಯರಿಗೆ ವಿಜ್ಞಾನದ ಅನುಕೂಲಗಳ ಬಗ್ಗೆ ವಿದ್ಯಾರ್ಥಿಗಳು ತಿಳಿಸಬೇಕು ಎಂದರು.

ವಿಜ್ಞಾನ ವೇದಿಕೆ ಸಂಚಾಲಕರಾದ ಪ್ರೊ.ಜಿ.ಎಸ್.ಮಹಾಲಿಂಗಯ್ಯ, ಪ್ರೊ. ಲಿಂಗರಾಜು, ಐ.ಕ್ಯೂ.ಎ.ಸಿ. ಸಂಚಾಲಕರಾದ ಡಾ.ಚಿತ್ತರಂಜನ್ ರೈ ಇದ್ದರು.



ತಿಪಟೂರು ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ನಡೆದ ವಿಜ್ಞಾನ ದಿನಾಚರಣೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಕೇಂದ್ರದ ಅಧ್ಯಕ್ಷ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕಲ್ಪತರು ವಿದ್ಯಾ ಸಂಸ್ಥೆ ಕಾರ್ಯದರ್ಶಿ ಪ್ರೊ.ರಾಜಕುಮಾರ್, ಪ್ರಾಂಶುಪಾಲ ಡಾ.ಎ.ಎಂ.ಶಿವಣ್ಣ ಇದ್ದಾರೆ



Name of the Event: National Science Day
Event held on: 08/03/2019
Appeared on Newspaper: 10/03/2019
Name of the Newspaper: Prajavani
Theme: Science for the People, People for the Science

Scanned with OKEN Scanner

ಪ್ರಜಾವಾಣಿ 9-2-19

4



ತಿಪಟೂರಿನಲ್ಲಿ ನಡೆದ ಫನ್ ಫೇರ್ ಕಾರ್ಯಕ್ರಮವನ್ನು ಕಲ್ಪತರು ವಿದ್ಯಾಸಂಸ್ಥೆಯ ಅಧ್ಯಕ್ಷ ಪಿ.ಕೆ. ತಿಪ್ಪೇರುದ್ರಪ್ಪ ಉದ್ಘಾಟಿಸಿದರು

## ತಾಂತ್ರಿಕ, ವ್ಯಾವಹಾರಿಕ ಜ್ಞಾನ ಅವಶ್ಯ

ತಿಪಟೂರು: ವಿದ್ಯಾರ್ಥಿಗಳು ವಿದ್ಯಾರ್ಥಿ ದಿಸೆಯಲ್ಲಿಯೆ ಪಠ್ಯದ ಜತೆಗೆ ಪಠ್ಯೇತರ ಚಟು ವಟಿಕೆ ಮೂಲಕ ತಾಂತ್ರಿಕ, ವ್ಯಾವಹಾರಿಕ ಜ್ಞಾನ ವೃದ್ಧಿಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ಬದುಕು ಕಂಡುಕೊಳ್ಳಬಹುದು ಎಂದು ಕಲ್ಪತರು ವಿದ್ಯಾಸಂಸ್ಥೆಯ ಅಧ್ಯಕ್ಷ ಪಿ.ಕೆ. ತಿಪ್ಪೇರುದ್ರಪ್ಪ ತಿಳಿಸಿದರು.

ನಗರದ ಕಲ್ಪತರು ವಿಜ್ಞಾನ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಫನ್ ಫೇರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುಗದಲ್ಲಿ ಕೇವಲ ಅಂಕಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಹೊರಗಿನ ಪ್ರಪಂಚದ ಆಗುಹೋಗುಗಳ ಬಗ್ಗೆ ಸಂಪೂರ್ಣ ಜ್ಞಾನ ಹೊಂದುವ ಅಗತ್ಯವಿದೆ. ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರಿಗೂ ಸರ್ಕಾರಿ ಕೆಲಸ ದೊರಕುವುದು ಅಸಾಧ್ಯದ ಸಂಗತಿ. ಸ್ವಂತ ಬುದ್ಧಿಯಿಂದ ಉದ್ಯೋಗ ಮಾಡುವ ಅನಿವಾರ್ಯತೆ ಇದೆ. ಯುವಕರು ಇಷ್ಟವಿರುವಂತಹ ಕ್ಷೇತ್ರದಲ್ಲಿ ಸಾಧಿಸುವ ಛಲ ಬೆಳೆಸಿಕೊಳ್ಳಬೇಕು ಎಂದರು.

ಪ್ರಾಂಶುಪಾಲ ಎ.ಎಂ. ಶಿವಣ್ಣ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ರುದ್ರಮುನಿಸ್ವಾಮಿ, ಉಪನ್ಯಾಸಕರು ಇದ್ದರು.

**TITLE OF THE ACTIVITY/EVENT : Fun Fair**

**DATE- 9-2-2019**

**Report:**

The President, Sri Thipperudraswamy, inaugurated the funfair, saying students should become self-reliant and entrepreneurs. Management members, teaching and non-teaching faculty and parents participated and encouraged the students.

Every year college organizes funfair that students manage. Food stalls and games adorn the campus. There were numerous stalls. It was filled with fun and laughter. Students prepared snacks, organic food, fruit juices, sugarcane juice, ice cream, and delicious regional delicacies like bonda, bajji, vada, panipuri and masala puri. And other chats were mind blogging. Students sold tender coconut, jackfruits, mangoes, masala papad etc. They sold the snacks for a relatively low price. They had arranged a lot of games which were full of entertainment. Students from sister concern institutions thronged the fair. Students socialized, and it was economic activity. Buying and selling were fun, and students made a profit. They experienced the art of business and ethics in business and became vendors for a day. Students manage this funfair, and teachers encourage them.


Name of the Event: Fun fair
Event held on: 08/02/2019
Appeared on Newspaper: 09/02/2019
Name of the Newspaper: Prajavani

Scanned with OKEN Scanner

2019-20

# ನಂಬಿ ಬದುಕುವ ಪ್ರಜ್ಞೆ ಎಲ್ಲರೂ ರೂಢಿಸಿಕೊಳ್ಳಿ

## ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ತತ್ವಪದಕಾರ ನಾದಮಣಿ ಸಲಹೆ



ತಂಬೂರಿ ನಾದ ಮತ್ತು ತತ್ವಪದಗಳ ಹಾಡಿನೊಂದಿಗೆ ತಮ್ಮ ಉಪನ್ಯಾಸ ನೀಡಿದ ತತ್ವಪದಕಾರರಾದ ನಾದಮಣಿನಾಲ್ಕೂರು.

• **ಕನ್ನಡಪ್ರಭ ವಾರ್ತೆ** ತಿಪಟೂರು

ಪ್ರತಿಯೊಬ್ಬರಲ್ಲಿಯೂ ನಂಬಿಕೆ ಇರಬೇಕು, ಯಾವುದೇ ಒತ್ತಡ, ಅನಾಹುತಗಳಾದರೂ ಬದುಕುವ ನಂಬಿಕೆ ಕಳೆದುಕೊಳ್ಳದೇ ನಮ್ಮ ಆತ್ಮಶಕ್ತಿಯನ್ನು ನಂಬಿ ಬದುಕುವ ಕಲೆಯನ್ನು ಎಲ್ಲರೂ ರೂಢಿಸಿಕೊಳ್ಳಬೇಕು ಎಂದು ಸಮಾಜ ಸುಧಾರಕ, ತತ್ವಪದಕಾರ ನಾದಮಣಿ ನಾಲ್ಕೂರು ತಿಳಿಸಿದರು.

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ತಮ್ಮ ತಂಬೂರಿ ನಾದ ಮತ್ತು ತತ್ವಪದಗಳ ಹಾಡುಗಳೊಂದಿಗೆ ಉಪನ್ಯಾಸ ನೀಡಿದ ಅವರು, ಬಹುಸಂಸ್ಕೃತಿ, ಬಹುತ್ವ ನಮ್ಮ ದೇಶದಲ್ಲಿದೆ. ಮಸೀದಿ, ಮಂದಿರ ಚರ್ಚ್‌ನಲ್ಲಿ ದೇವರಿದ್ದಾನೆ. ಅಂತೆಯೆ ನಮ್ಮ ಮಂದಿರದಲ್ಲಿ ಅಲ್ಲಾ, ರಾಮ, ಕೃಷ್ಣ, ಶಿವ, ಏಸು, ಮಾರಮ್ಮ ಜುಂಜಪ್ಪರಿದ್ದಾರೆ. ಹೀಗೆ ಬಹುಸಂಸ್ಕೃತಿ ಇರುವ ನಮ್ಮ ದೇಶದಲ್ಲಿ ಶಾಂತಿ, ನೆಮ್ಮದಿ ನೆಲೆಸಿದ್ದು, ಇಲ್ಲಿ ಹುಟ್ಟಿರುವ ನಾವೇ ಪುಣ್ಯವಂತರು. ಹೆಣ್ಣುಮಕ್ಕಳು ಶೋಷಣೆಯನ್ನು ಧೈರ್ಯವಾಗಿ ಹೇಳಿಕೊಂಡು ಎದುರಿಸಿದಲ್ಲಿ ಆಗ ಲಿಂಗತಾರತಮ್ಯ, ದೌರ್ಜನ್ಯ ಕಡಿಮೆಯಾಗಲಿದೆ ಎಂದರು.

ಪ್ರಾಂಶುಪಾಲ ಡಾ. ಎ.ಎಂ. ಶಿವಣ್ಣ ಅಧ್ಯಕ್ಷತೆ ವಹಿಸಿ, ಮೌಢ್ಯಾಚರಣೆ ವಿರೋಧಿಸಬೇಕು. ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವ ಸುಧಾರಕರು ಇಂದು ಅಗತ್ಯವಾಗಿ ಬೇಕಾಗಿದ್ದು, ಅವರ ಆದರ್ಶಮೌಲ್ಯಗಳನ್ನು ವಿದ್ಯಾರ್ಥಿಗಳು ವಿದ್ಯಾರ್ಥಿ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಸುಧಾರಣೆಗೆ ಕೈಜೋಡಿಸಬೇಕೆಂದರು.

ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಕೆ.ಪಿ.ವೀರಣ್ಣ ಸಂಗೀತ ಮತ್ತು ತತ್ವಪದಗಳ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಪ್ರೊ. ಬಿ.ಸಿ. ವಿನುತ ಸೇರಿದಂತೆ ಅಧ್ಯಾಪಕ, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

Name of the Event: Folk – lore based on modern day issues
Event held on: 15/07/2019
Appeared on Newspaper: 19/07/2019
Name of the Newspaper: Kannada Prabha

Scanned with OKEN Scanner

## ತಿಪಟೂರಿನಲ್ಲಿ ಫನ್‌ಫೈರ್–2020ಕ್ಕೆ ಚಾಲನೆ

# ಪಠ್ಯದ ಜತೆ ಕ್ರೀಡೆಯೂ ಇರಲಿ

• ದಿಗಂತ ವರದಿ, ತಿಪಟೂರು

ವಿದ್ಯಾರ್ಥಿ ದಿಸೆಯಿಂದಲೇ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆ, ವ್ಯವಹಾರಿಕ ಜ್ಞಾನವನ್ನು ವೃದ್ಧಿಸಿಕೊಳ್ಳುವುದರಿಂದ ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಕಲ್ಪತರು ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ.ರಾಜಕುಮಾರ್ ಅವರು ತಿಳಿಸಿದರು.

ಕಲ್ಪತರು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಫನ್ ಫೈರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದಿನ ಯುಗದಲ್ಲಿ ಕೇವಲ ಓದಿನಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಹೊರಗಿನ ಪ್ರಪಂಚದ ಹಾಗುಹೋಗುಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಹೊಂದುವ ಅಗತ್ಯವಿದೆ ಎಂದರು.

ಪಠ್ಯದಲ್ಲಿ ಒಂದು ವಸ್ತುವನ್ನು ಖರೀದಿಸುವ ಬಗ್ಗೆ ಮಾಹಿತಿಯಿದ್ದರೆ ಅದನ್ನು ವ್ಯವಹಾರಿಕವಾಗಿ ಮಾರು ಕಟ್ಟೆಯಲ್ಲಿ ತಾನೇ ಖುದಾಗಿ ಕೊಂಡುಕೊಳ್ಳುವುದರಿಂದ ಜ್ಞಾನ ವೃದ್ಧಿಯಾಗುತ್ತದೆ. ಮಾರುಕಟ್ಟೆಯ ವ್ಯವಹಾರಿಕ ಶೈಲಿಯ ಬಗ್ಗೆಯೂ ಪರಿಚಯವಾಗುತ್ತದೆ ಎಂದು ಹೇಳಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರಿಗೂ ಸರ್ಕಾರಿ ಕೆಲಸ ದೊರಕುವುದು ಅಸಾಧ್ಯದ ಸಂಗತಿ ಯಾಗಿದೆ. ಸ್ವಂತ ಬುದ್ಧಿವಂತಿಕೆಯಿಂದ ಉದ್ಯೋಗವನ್ನು ಮಾಡುವ ಶಕ್ತಿಯನ್ನು ಹೊಂದಿರುವುದು ಅನಿರ್ವಾಯವಾಗಿದೆ ಎಂದು ತಿಳಿಸಿದರು. ಭಾರತದಲ್ಲಿ ಶೇ.65ಕ್ಕೂ ಹೆಚ್ಚಿನ ಯುವ ಜನತೆ ಯಿದ್ದು ಪ್ರತಿಯೊಬ್ಬರು . ತಮ್ಮ ಜವಾಬ್ದಾರಿಯನ್ನು ಅರಿತು ತಮಗೆ ಇಷ್ಟವಿರುವಂತಹ ಕ್ಷೇತ್ರದಲ್ಲಿ ಏನಾದರೂ ಸಾಧಿಸುವ ಛಲವನ್ನು ಹೊಂದಬೇಕು. ಸಾಧಿಸಿದರೆ ದೇಶವೂ ಪ್ರಪಂಚದಲ್ಲಿ ಪ್ರಥಮ ಸ್ಥಾನಕ್ಕೇರುವುದರಲ್ಲಿ ಅನುಮಾನವಿಲ್ಲ.

> **ಫನ್ ಫೈರ್ ಆಯೋಜನೆಯಿಂದಾಗಿ ಸಮಾಜದಲ್ಲಿ ವ್ಯಕ್ತಿಗಳೊಂದಿಗೆ ಹೇಗೆ ವ್ಯವಹರಿಸಬೇಕು ಎನ್ನುವ ಜ್ಞಾನದೊಂದಿಗೆ ಮಾರುಕಟ್ಟೆ ವ್ಯವಹಾರದ ಜ್ಞಾನ ದೊರೆತಿದೆ. ತುಂಬಾ ಖುಷಿಯ ಸಂಗತಿ.**
>
> ■ ದಿವ್ಯಶ್ರೀ , ವಿದ್ಯಾರ್ಥಿನಿ.

ಗುರುಗಳ ಮಾರ್ಗದರ್ಶನ, ಪೋಷಕರ ಸಂಸ್ಕೃತಿ-ಸಂಸ್ಕಾರಗಳು ವಿಚಾರವಂತರಾಗಲು ನೆರವಾಗುತ್ತವೆ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಜವಾಬ್ದಾರಿಗಳ ಬಗ್ಗೆ ಅರಿತು ನಡೆದಾಗ ಮಾತ್ರವೇ ಸುಖೀ ಜೀವನ ನಡೆಸಲು ಸಾಧ್ಯ ಎಂದರು.ಕಲ್ಪತರು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎ.ಎಂ.ಶಿವಣ್ಣ ಅವರು ಮಾತನಾಡಿ ವಿದ್ಯಾರ್ಥಿಗಳಲ್ಲಿ ವ್ಯವಹಾರಿಕ ಜ್ಞಾನ ವೃದ್ಧಿಯ ಸಲುವಾಗಿ ಕಾರ್ಯಕ್ರಮವನ್ನು ಕಾಲೇಜಿನ ವತಿಯಿಂದ ಆಯೋಜಿಸಲಾಗಿದೆ. ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ದೊರಕಿದ್ದು ಸಂತಸದ ಸಂಗತಿಯಾಗಿದೆ ಎಂದು ಹೇಳಿದುರ.

ಶಿಕ್ಷಣದ ಹೊರತಾಗಿ ಇತರ ಕ್ಷೇತ್ರಗಳಲ್ಲಿಯೂ ಜ್ಞಾನವಿದ್ದರೇ ಜೀವನ ನಿರ್ವಹಣೆಯ ಕಲೆಯಲ್ಲಿ ಅರಿಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ಸಮಾಜದಲ್ಲಿ ವ್ಯವಹಾರದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಒದಗಿಸುವುದು ಅತ್ಯಗತ್ಯವಾಗಿದೆ ಎಂದರು.ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ರುದ್ರಮುನಿಸ್ವಾಮಿ, ಟಿ.ಯು.ಜಗದೀಶಮೂರ್ತಿ, ಉಪನ್ಯಾಸಕರುಗಳು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ತಿಪಟೂರಿನ ಕಲ್ಪತರು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ನಡೆದ ಫನ್‌ಫೈರ್ ಕಾರ್ಯಕ್ರಮವನ್ನು ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ.ರಾಜಕುಮಾರ್, ರುದ್ರಮುನಿಸ್ವಾಮಿ ಉದ್ಘಾಟಿಸಿದರು.

Name of the Event: Fun fair
Event held on: 15/02/2020
Appeared on Newspaper: 17/02/2020
Name of the Newspaper: Hosadigantha

Scanned with OKEN Scanner


Name of the Event: Mathrubhashadivas
Event held on: 21/02/2020
Appeared on Newspaper: 25/02/2020
Name of the Newspaper: Samyuktha Karnataka
Theme: Save Mother Language

# ಮಾತೃಭಾಷೆ ಉಳಿಸಿ ಬೆಳೆಸುವ ಕೆಲಸವಾಗಲಿ

ಸಂ.ಕ ಸಮಾಚಾರ ತಿಪಟೂರು

ಭಾಷೆ ಎನ್ನುವುದು ಕೇವಲ ಒಂದು ಭಾಷೆಯಲ್ಲ, ಆ ಸಮುದಾಯದ ಸಂಸ್ಕೃತಿಯಲ್ಲಿ ಅಡಗಿದ್ದು, ಭಾಷೆ ಬಳಸದೆ ಹೋದರೆ, ಆ ಸಂಸ್ಕೃತಿ ನಶಿಸಿಹೋಗುತ್ತದೆ ಎಂದು ಕನ್ನಡ ಪ್ರಾಧ್ಯಾಪಕ ಪ್ರೊ ಕೆ.ಪಿ.ವೀರಣ್ಣ ತಿಳಿಸಿದರು.

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ವಿಶ್ವ ಮಾತೃ ಭಾಷಾ ದಿವಸ ಆಚರಣೆಯಲ್ಲಿ ಮಾತನಾಡಿ, ನಮ್ಮ ಭಾಷೆ ಬಗ್ಗೆ ಅಭಿಮಾನವಿರಬೇಕು. ಮಾತೃ ಭಾಷೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ನೀಡಬೇಕೆಂದು ವಿಶ್ವದ ಅನೇಕ ವಿದ್ವಾಂಸರು ಹೇಳಿದ್ದಾರೆ. ಕುವೆಂಪು, ಕಾರಂತ ಮುಂತಾದ ಮಹನೀಯರು ಮಗುವಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು. ಮಾತೃ ಭಾಷೆಯಲ್ಲಿ ಪರಿಪೂರ್ಣವಾಗಿ ಕಲಿತ ಮೇಲೆ ಬೇರೊಂದು ಭಾಷೆ ಕಲಿಯುವುದು ಸುಲಭ. ನಾವು ವಿಷಯವನ್ನು ಪರಭಾಷೆಯಲ್ಲಿ ಬರೆಯಬೇಕಾದರೆ ಮೊದಲು ಮಾತೃ ಭಾಷೆಯಲ್ಲಿ ಚಿಂತನೆ ಮಾಡಿ ಮಾನಸಿಕ ಅನುವಾದದಿಂದ ಬರೆಯುತ್ತೇವೆ. ಆದರೆ ಮಾತೃ ಭಾಷೆಯಲ್ಲಿ ಚಿಂತಿಸಿ ಪರಿಪೂರ್ಣವಾಗಿ ಬರೆಯಬಹುದಾಗಿದೆ. ಭಾಷೆ ಉಳಿವು, ಅಳಿವು ಆ ಸಮುದಾಯದ ಕೈಯಲ್ಲಿದೆ ಎಂದರು.




ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ವಿಶ್ವ ಮಾತೃ ಭಾಷಾ ದಿವಸ ಆಚರಣೆಯಲ್ಲಿ ಪ್ರಾಂಶುಪಾಲ ಡಾ. ಎ.ಎಂ.ಶಿವಣ್ಣ ಮಾತನಾಡಿದರು.

ಆಂಗ್ಲಭಾಷಾ ಪ್ರಾಧ್ಯಾಪಕ ಬಿ.ಸಿ.ವಿನುತ ಮಾತನಾಡಿ, ವಿಶ್ವದ ಭಾಷೆಗಳಲ್ಲಿ ಶೇ.10ರಷ್ಟು ಮಾತೃಭಾಷೆಗಳು ಭಾರತದಲ್ಲಿದ್ದು, ಅಳಿವಿನಂಚಿನ ಭಾಷೆಗಳು ಭಾರತದಲ್ಲಿ ಹೆಚ್ಚಿವೆ. ಪ್ರಕೃತಿಯಲ್ಲಿರುವಂತೆ ಬಹುಭಾಷೆಗಳು ನಮ್ಮಲ್ಲಿರಬೇಕು.

ಮಾಸ್ತಿ, ಡಿ.ವಿ.ಜಿ. ಬೇಂದ್ರೆ, ಕಾರ್ನಾಡ್ ಮುಂತಾದವರು ತೆಲುಗು, ತಮಿಳು, ಮರಾಠಿ ಭಾಷೆಗಳನ್ನು ತಮ್ಮ ಮನೆಯಲ್ಲಿ ಮಾತನಾಡುತ್ತಿದ್ದರು. ಕನ್ನಡ ಮಾತೃಭಾಷೆಯಲ್ಲಿಯೇ ಹೆಸರುಗಳಿಸಿದರು. ರವೀಂದ್ರನಾಥ್ ಠಾಕೂರ್, ಗಾಂಧೀಜಿ, ಅಂಬೇಡ್ಕರ್ ಹೇಳಿರುವಂತೆ ನಮಗೆ ಮಾತೃಭಾಷೆಯಲ್ಲಿ ಅಡಿಪಾಯವಾಗಬೇಕು.

ಪಾಶ್ಚಿಮಾತ್ಯ ಭಾಷೆಯನ್ನು ಜ್ಞಾನಕ್ಕೆ ಬಳಸಬೇಕು. ಮಾತೃಭಾಷೆಯನ್ನು ನಾವು ಉಳಿಸಿ ಬೆಳೆಸುತ್ತ ಹೆಚ್ಚೆಚ್ಚು ಬಳಸುವ ಕೆಲಸ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎ.ಎಂ.ಶಿವಣ್ಣ ಮಾತನಾಡಿ, ಮಾತೃಭಾಷೆಯ ಮಹತ್ವದ ಬಗ್ಗೆ ತಿಳಿಸಿದರು. ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಬೋಧಕ ಮತ್ತು ಬೋಧಕೇತರರು, ವಿದ್ಯಾರ್ಥಿಗಳು ಭಾಗಿಯಾಗಿದ್ದರು.

# ಭಾಷೆ ಉಳಿವು ನಮ್ಮಿಂದಾಗಲಿ

25.2.20

ತಿಪಟೂರು: ಸಾವಿರಾರು ವರ್ಷಗಳ ಜೀವನಾಡಿಯಾಗಿರುವ ಭಾಷೆ ಉಳಿವಿಗೆ ನಾವೇ ಕಾರಣರಾಗಿದ್ದು, ಭಾಷೆ ಎನ್ನುವುದು ಕೇವಲ ಒಂದು ಭಾಷೆಯಲ್ಲ, ಆ ಸಮುದಾಯದ ಸಂಸ್ಕೃತಿಯಲ್ಲಿ ಅಡಗಿದೆ ಎಂದು ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ. ಕೆ.ಪಿ.ವೀರಣ್ಣ ತಿಳಿಸಿದರು. ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ವಿಶ್ವ ಮಾತೃ ಭಾಷಾ ದಿವಸ ಆಚರಣೆಯಲ್ಲಿ ಮಾತನಾಡಿ, ನಮ್ಮ ಭಾಷೆ ಬಗ್ಗೆ ಅಭಿಮಾನವಿರಬೇಕು. ಮಾತೃ ಭಾಷೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ನೀಡಬೇಕೆಂದು ವಿಶ್ವದ ಅನೇಕ ವಿದ್ವಾಂಸರು ಹೇಳಿದ್ದಾರೆ. ಕುವೆಂಪು, ಕಾರಂತ ಮುಂತಾದ ಮಹನೀಯರು ಮಗುವಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು. ಮಾತೃ ಭಾಷೆಯಲ್ಲಿ ಪರಿಪೂರ್ಣವಾಗಿ ಕಲಿತ ಮೇಲೆ ಬೇರೊಂದು ಭಾಷೆ ಕಲಿಯುವುದು ಸುಲಭ ಎಂದರು. ಆಂಗ್ಲಭಾಷಾ ಪ್ರಾಧ್ಯಾಪಕ ಪ್ರೊ. ಬಿ.ಸಿ. ವಿನುತ ಮಾತನಾಡಿ, ವಿಶ್ವದ ಭಾಷೆಗಳಲ್ಲಿ ಶೇ.10ರಷ್ಟು ಮಾತೃಭಾಷೆಗಳು ಭಾರತದಲ್ಲಿದ್ದು, ಅಳಿವಿನಂಚಿನ ಭಾಷೆಗಳು ಭಾರತದಲ್ಲಿ ಹೆಚ್ಚಿವೆ. ಪ್ರಕೃತಿಯಲ್ಲಿರುವಂತೆ ಬಹುಭಾಷೆಗಳು ನಮ್ಮಲ್ಲಿರಬೇಕು. ಮಾಸ್ತಿ, ಡಿ.ವಿ.ಜಿ. ಬೇಂದ್ರೆ, ಕಾರ್ನಾಡ್ ಮುಂತಾದವರು ತೆಲುಗು, ತಮಿಳು, ಮರಾಠಿ ಭಾಷೆ ಮಾತನಾಡುತ್ತಿದ್ದರು. ಕನ್ನಡ ಮಾತೃಭಾಷೆಯಲ್ಲಿಯೇ ಹೆಸರುಗಳಿಸಿದರು. ರವೀಂದ್ರನಾಥ್ ಠಾಕೂರ್, ಗಾಂಧೀಜಿ, ಅಂಬೇಡ್ಕರ್ ಹೇಳಿರುವಂತೆ ನಮಗೆ ಮಾತೃಭಾಷೆಯಲ್ಲಿ ಅಡಿಪಾಯ ವಾಗಬೇಕು. ಪಾಶ್ಚಿಮಾತ್ಯ ಭಾಷೆ ಜ್ಞಾನಕ್ಕೆ ಬಳಸಬೇಕು. ಮಾತೃ ಭಾಷೆ ನಾವು ಉಳಿಸಿ ಬೆಳೆಸುತ್ತ ಹೆಚ್ಚೆಚ್ಚು ಬಳಸುವ ಕೆಲಸ ಮಾಡಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎ.ಎಂ.ಶಿವಣ್ಣ ಮಾತನಾಡಿ, ಮಾತೃಭಾಷೆ ಮಹತ್ವದ ಬಗ್ಗೆ ತಿಳಿಸಿದರು. ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಬೋಧಕ ಮತ್ತು ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

**TITLE OF THE ACTIVITY/EVENT: Mathrubhasha Divas**

***DATE- 25-2-2020***

**NAME OF THE RESOURCE PERSON- Prof. Vinutha and Prof. Veeranna**

**DESIGNATION OF THE RESOURCE PERSON- Vinutha- Associate Professor of English, HoD Veeranna, Associate Professor of Kannada and HoD.**

**Report:**

Prof. Vinutha said, according to Devy-Language is the bridge between human consciousness and the rest of the World. Language has a unique way of looking at the World. Human evolution is an indication of diversity. Diversity is Nature's regime. If there is no diversity, then the evolution process will go down and slow down. To keep the evolution process alive, we must keep diversity alive. It is not politically essential but naturally crucial for survival. Language diversity is as important as the diversity of plants, animal species, food habits, and so on. According to Devy, Diversity is the best religion. The World has 6000 languages, and 10%, around 780, is in India. Masti, DVG, Bendre, and would speak Tamil, Telugu and Marathi in their homes but were proficient in Kannada and became famous as Kannada writers. Everybody in India is bilingual/ multilingual. Language diversity keeps us going, and it keeps us united. Heart of Democracy is listening to diverse voices. Gandhiji opposed English education in India. Shivaram Karanth, Tagore, wanted the education to be in native or regional languages because concept formation happens in the mother tongue.

Veeranna said the mother tongue is vital to promote linguistic and cultural diversity. We should be proud of our language and impart education through our mother tongue. He further said one could protect and preserve the mother tongue by speaking. Mother tongue connects a bond between our heritage and socio-cultural identity. Principal Dr. Shivanna said the mother tongue is the most powerful tool in building our nation's heritage.

Faculty, non-teaching staff and students were present.

Scanned with OKEN Scanner